ಅ) ಇಲ್ಲದಿದ್ದಲ್ಲಿ ಕಳೆದ ವರ್ಷ ಈ ನೌಕರರ ಸಂಘದವರು ಮುಷ್ಕರವನ್ನು ಹೂಡಿದ ಸಮಯದಲ್ಲಿ ಸರ್ಕಾರವು ಇವರುಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಬಗ್ಗೆ ಪರಿಶೀಲನೆ ಮಾಡುವುದಾಗಿ ಭರವಸೆ ಕೊಟ್ಟಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಭರವಸೆಯನ್ನು ಈಡೇರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಇ) ಈ ಗ್ರಾಮ ಸೇವಾ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಹೆಚ್ಚಿನ ವೇತನವನ್ನು ಕೊಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು):

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ ಬಗ್ಗೆ.

1602 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು? ಮತ್ತು ಇತರೆ ಕಾರ್ಡುಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು?

ಆ) ರಾಜ್ಯದಲ್ಲಿರುವ ಹಸಿರು ಮತ್ತು ಇತರೆ ಕಾರ್ಡುಗಳನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು?

ಈ) ಗ್ರಾಮೀಣ ಪ್ರದೇಶದಲ್ಲಿ ಹಸಿರು ಕಾರ್ಡುಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಉ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 1) ಹಸಿರು ಕಾರ್ಡುಗಳು 31,14,332

2) ಇತರೆ ಕಾರ್ಡುಗಳು 47,24,277

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ತೋರಿಸಿದೆ).

ಆ) ಈ ಯೋಜನೆಯಡಿಯಲ್ಲಿ ನೀಡಲಾದ ಹಸಿರು ಕಾರ್ಡುದಾರರ ಪುನರ್ ಸಮೀಕ್ಷೆ ಜರುಗಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಇಷ್ಟರಲ್ಲಿಯೇ

ಈ) ಹೌದು

ಉ) ಸರ್ಕಾರವು ಸಂಬಂಧಪಟ್ಟವರಿಗೆಲ್ಲಾ ನಿರ್ದೇಶನ ನೀಡಿದೆ. ಈವರೆಗೆ ಇಂತಹ 37,370 ಕಾರ್ಡುಗಳನ್ನು ರದ್ದುಪಡಿಸಲಾಗಿದೆ.

ಅನುಬಂಧ 1

ಕ್ರ. ಸಂ	ಜಿಲ್ಲೆಗಳ ಹೆಸರು	ಹಸಿರು ಪಡಿತರ ಚೀಟಿಗಳು	ಇತರೆ ಪಡಿತರ ಚೀಟಿಗಳು
1.	ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ	75,785	7,86,031
2.	ಬೆಂಗಳೂರು (ಗ್ರಾ)	1,43,608	1,67,473
3.	ಬೆಳಗಾಂ	2,10,056	4,00,453
4.	ಬಳ್ಳಾರಿ	1,20,045	1,63,420
5.	ಬೀದರ್	83,452	1,22,626
6.	ಬಿಜಾಪುರ	1,98,165	2,94,094
7.	ಚಿಕ್ಕಮಗಳೂರು	1,04,044	91,471
8.	ಚಿತ್ರದುರ್ಗ	1,68,978	2,29,128
9..	ದಕ್ಷಿಣ ಕನ್ನಡ	1,29,118	3,37,949
10.	ಧಾರವಾಡ	2,55,043	3,09,502
11.	ಗುಲ್ಬರ್ಗಾ	2,07,666	2,23,126
12.	ಹಾಸನ	1,33,867	1,46,925
13.	ಕೊಡಗು	56,484	47,493
14.	ಕೋಲಾರ	1,96,056	2,23,734
15.	ಮಂಡ್ಯ	1,52,426	1,51,572
16.	ಮೈಸೂರು	2,42,094	3,29,790
17.	ರಾಯಚೂರು	1,73,137	2,17,449
18.	ಶಿವಮೊಗ್ಗ	1,39,733	1,79,453
19.	ತುಮಕೂರು	2,23,671	1,92,910
20.	ಉತ್ತರಕನ್ನಡ	1,00,904	1,09,678
	ಒಟ್ಟು	31,14,332	47,24,277

ಬೀದರ್ ಜಿಲ್ಲೆಗೆ ನೀಡಲಾಗಿರುವ ಸೀಮೆಎಣ್ಣೆಯ ಪ್ರಮಾಣ.

1603 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 3 ತಿಂಗಳುಗಳಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಬಂದ ಸೀಮೆಎಣ್ಣೆಯ ಪ್ರಮಾಣವೆಷ್ಟು?*

ಆ) *ಇದರಲ್ಲಿ ರಾಜ್ಯ ಸರ್ಕಾರವು ಈ ಅವಧಿಯಲ್ಲಿ ರಾಜ್ಯದ ಪ್ರತಿ ಜಿಲ್ಲೆಗೆ ಎಷ್ಟು ಪ್ರಮಾಣದ ಸೀಮೆ ಎಣ್ಣೆಯನ್ನು ಸರಬರಾಜು ಮಾಡಿದೇ?*

ಇ) *ಬೀದರ್ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸೀಮೆಎಣ್ಣೆಯು ಸರಿಯಾಗಿ ದೊರೆಯದೆ ಇರುವುದು ಹಾಗೂ ಇಲ್ಲಿನ ಬಹುತೇಕ ತಾಲ್ಲೂಕ್ ಗಳಲ್ಲಿ ಸೀಮೆಎಣ್ಣೆಯನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*